ಮಂಚದ ವ್ಯವಸ್ಥೆ ಮಾಡಿದರು, ಡಾಕ್ಟರ್ ಬಳಿ ಕರೆದೊಯ್ದರು. ಗೋಪಿದಾಸಿ ಸುಧೀರಾ ಅಕ್ಕನಿಗೆ ಪತ್ರ ಬರೆಯುವಂತೆ ಹೇಳಿದರು. ನಾನೆಂದೆ, "ಗೋಪಿ ದೀದಿ, ಏಕೆ ಅಷ್ಟು ಗಾಬರಿಯಾಗುತ್ತೀರಿ? ಬೃಂದಾವನದಲ್ಲಿ ಶರೀರ ಹೋದರೆ ಒಳ್ಳೆಯದೆ ತಾನೆ?"

ವಿಷಯ ತಿಳಿದು ಸುಧೀರಾ ಅಕ್ಕ ಬೃಂದಾವನಕ್ಕೆ ಬರಲು ಯತ್ನಿಸಿದರೂ ಅವರ ಅಣ್ಣಂದಿರು ಅವರನ್ನು ಬಿಡಲಿಲ್ಲ. ಜ್ವರ ಬಿಟ್ಟು, ನಾನು ಅನ್ನ ಊಟ ಮಾಡುತ್ತಿರುವುದು ತಿಳಿದ ಮೇಲೆ ನಿಶ್ಚಿಂತರಾದರು. ಎಷ್ಟು ಸುಂದರವಾದ ಪತ್ರಗಳನ್ನು ಬರೆಯುತ್ತಿದ್ದರೆಂದರೆ ನನ್ನ ಮನಸ್ಸು, ಪ್ರಾಣಗಳು ಅಪಾರ ಶಾಂತಿಯಿಂದ ತುಂಬಿಹೋಗುತ್ತಿದ್ದವು. ಪ್ರತಿ ಪತ್ರದಲ್ಲೂ ಒಂದೇ ವಿಷಯ – "ಭಗವಂತನನ್ನು ಸ್ವಂತದವರಿಗಿಂತ ಹತ್ತಿರದವನನ್ನಾಗಿ ಮಾಡಿಕೋ ... ಆತನನ್ನು ಬಿಟ್ಟರೆ ಇನ್ನೆಲ್ಲವೂ ಮಿಥ್ಯೆ, ಎಲ್ಲವೂ ಹೊರಗಿನದು...." ನನ್ನಲ್ಲೂ, ಜಪಧ್ಯಾನದಲ್ಲಿ ನಿಷ್ಠೆ ಹಾಗೂ ವೈರಾಗ್ಯ – ಇವುಗಳ ವೃದ್ಧಿಯಾಯಿತು. ಆ ಸಣ್ಣ ಜೋಪಡಿಯಲ್ಲಿ ಮಂಚದ ಮೇಲೆ ಕುಳಿತು, ಇಲ್ಲವೇ ಮಲಗಿಕೊಂಡೇ, ಯಾವಾಗಲೂ ಜಪ ಮಾಡುತ್ತಿದ್ದೆ. ಬೇರೆ ಯಾವ ಚಿಂತೆಯೂ ನನಗೆ ಇರಲಿಲ್ಲ.

ಗುರುಪೂರ್ಣಿಮೆಯ ದಿನದಂದು ಬೃಂದಾವನದಲ್ಲಿ ಗೋವರ್ಧನ ಬೆಟ್ಟದ ಪರಿಕ್ರಮವನ್ನು ಮಾಡುತ್ತಾರೆ. ಅದೊಂದು ದೊಡ್ಡ ಹಬ್ಬ. ಗೋಪಿದಾಸಿ ಆ ದಿನ ಬೆಳಿಗ್ಗೆ ಮುಂಚೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೊರಟರು. ಮೊದಲು ರೈಲಿನಲ್ಲಿ ಮಥುರೆಗೆ, ಅಲ್ಲಿಂದ ಬಸ್ಸಿನಲ್ಲಿ ರಾಧಾಕುಂಡಕ್ಕೆ ಹೋಗಬೇಕು. ನಮಗೆ ಬಸ್ಸು ಸಿಗಲಿಲ್ಲ. ಒಂಟೆಯ ಗಾಡಿಯಲ್ಲಿ ಕುಳಿತು ತಲುಪುವಾಗ ಸಾಯಂಕಾಲವಾಯಿತು. ಇಡೀ ದಿನ ಉಪವಾಸವಿದ್ದು ರಾಧಾಕುಂಡ, ಶ್ಯಾಮಕುಂಡಗಳಲ್ಲಿ ಸ್ನಾನ ಮಾಡಿದೆವು. ಸಂಜೆ ಪರಿಕ್ರಮ ಆರಂಭವಾಗುತ್ತದೆ. ರಸ್ತೆಯಲ್ಲಿ ಅಲ್ಲಲ್ಲಿ ಬಯಲಾಟ, ಕೀರ್ತನೆಗಳು ನಡೆಯುತ್ತಿದ್ದವು. ನಿಂತು, ನಿಂತು ನೋಡುತ್ತಾ ಮುಂದುವರೆದೆವು. ಬೆಳಗ್ಗೆ ರಾಧಾಕುಂಡಕ್ಕೆ ಹಿಂತಿರುಗಿ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಅಕ್ಕಿ, ಬೇಳೆ, ಆಲೂಗಡ್ಡೆ ಕೊಂಡುತಂದು ಒಟ್ಟಿಗೆ ಬೇಯಿಸಿಕೊಂಡು ಅಡುಗೆ ಮಾಡಿದೆವು. ಹಿಂದಿನ ದಿನವೆಲ್ಲಾ ಉಪವಾಸವಿದ್ದುದರಿಂದ ಆ ಊಟ ಅಮೃತವೆನಿಸಿತ್ತು. ಸಂಜೆ ಬೃಂದಾವನದತ್ತ ನಡೆದೇ ಹೊರಟೆವು. ಮಾರ್ಗಮಧ್ಯದಲ್ಲಿಯೇ ರಾತ್ರಿಯಾಯಿತು. ಹತ್ತಿರದಲ್ಲಿ ಒಂದು ದೇವಸ್ಥಾನ ಕಂಡುಬಂದಿತು. ಗೋಪಿದಾಸಿ ಅಲ್ಲೇ ರಾತ್ರಿ ಕಳೆಯಲು ತೀರ್ಮಾನಿಸಿದರು. ಪುರೋಹಿತರ ಅನುಮತಿ ಪಡೆದು ಇಬ್ಬರೂ ದೇವಸ್ಥಾನದೊಳಗೆ ಮಲಗಿದೆವು. ಇಡೀ ರಾತ್ರಿ ನಾನು ಭಯದಿಂದಲೇ ಕಳೆದೆ. ಬೆಳಗಿನ ಜಾವ ಮೂರು ಗಂಟೆಗೇ ಗೋಪಿದಾಸಿ ನನ್ನನ್ನು ಎಬ್ಬಿಸಿ, ಹೊರಡಲು ಹೇಳಿದರು. "ಎಂಥ ಕತ್ತಲು, ಏನೂ ಕಾಣಿಸುತ್ತಿಲ್ಲ" ಎನ್ನುತ್ತಲೇ ನಡೆಯಲಾರಂಭಿಸಿದೆವು. ಬೆಳಿಗ್ಗೆ ೮–೯ ಗಂಟೆಗೆ ಬೃಂದಾವನ ತಲುಪಿದೆವು. ಕೋಣೆಯಲ್ಲಿದ್ದ ಒಣಗಿದ ರೊಟ್ಟಿಯನ್ನೇ ಸ್ವಲ್ಪ ಮಜ್ಜಿಗೆ ತಂದು ನೆನೆಸಿ ತಿಂದೆವು. ಕಾಲು ವಿಪರೀತ ನೋಯುತ್ತಿತ್ತು. ಎಣ್ಣೆಯಲ್ಲಿ ಉಪ್ಪು ಸೇರಿಸಿ, ಅದನ್ನು ಚೆನ್ನಾಗಿ ಕಾಲಿಗೆ ತಿಕ್ಕಿ ಮಲಗುವಂತೆ ಗೋಪಿ ದಾಸಿ ಹೇಳಿದರು. ಅವರು ಹೇಳಿದಂತೆಯೇ ಮಾಡಿದಾಗ ನಿಜವಾಗಿಯೂ ನೋವು ಕಡಿಮೆಯಾಯಿತು. ಅಷ್ಟೆಲ್ಲಾ ಕಷ್ಟ ಅನುಭವಿಸಿದರೂ ಗೋವರ್ಧನ ಬೆಟ್ಟದ ಪ್ರದಕ್ಷಿಣೆ ಮಾಡಿ ಬಂದ ಮೇಲೆ ತುಂಬ ಆನಂದವಾಗಿತ್ತು.

ಬೃಂದಾವನದಲ್ಲಿ ಝೂಲನ್ ಹಬ್ಬ ಆರಂಭವಾಯಿತು. ಅಷ್ಟರಲ್ಲಿ ಸುಧೀರಾ ಅಕ್ಕನ ಪತ್ರ ಬಂದಿತು. ನನಗೆ ಸಿಮ್ಲಾಕ್ಕೆ ಹೊರಟುಬರುವಂತೆ ಅವರು ಬರೆದಿದ್ದರು. ಅಲ್ಲದೆ ರೈಲಿನ ಟಿಕೆಟ್ ಕೊಳ್ಳಲು ಹತ್ತು ರೂಪಾಯಿ ಕೂಡ ಕಳಿಸಿದ್ದರು. ಅಲ್ಲಿ ಅವರ ಸೋದರಮಾವನ ಮಗಳ ಮನೆಯಲ್ಲಿ ಇರಬೇಕೆಂದು ನನಗೆ ಸೂಚಿಸಿದ್ದರು. ನಾನು ಹೊರಡಲು ಸಿದ್ಧಳಾಗತೊಡಗಿದೆ. ಗೋಪಿದಾಸಿಯ ಅಳು ನಿಲ್ಲುತ್ತಿಲ್ಲ. ನನಗೂ ಅವರನ್ನು ಬಿಟ್ಟುಹೋಗಲು ಮನಸ್ಸಿಗೆ ಬಹಳ ಕಷ್ಟವಾಗಿತ್ತು. ಸುಧೀರಾ ಅಕ್ಕ ಹೇಳಿದಂತೆ, ನನ್ನ ಬಳಿಯಿದ್ದ ಪಾತ್ರೆಗಳು ಮುಂತಾದ ಎಲ್ಲಾ ವಸ್ತುಗಳನ್ನೂ ಗೋಪಿದಾಸಿಗೇ ಕೊಟ್ಟು ದಿಲ್ಲಿಯ ರೈಲನ್ನು ಹತ್ತಿದೆ. ದಿಲ್ಲಿಯಿಂದ ಸುಧೀರಾ ಅಕ್ಕನ ಸಂಬಂಧಿಕರೊಬ್ಬರೊಡನೆ ಸಿಮ್ಲಾಕ್ಕೆ ರೈಲಿನಲ್ಲಿ ಹೊರಟೆ.

(ಮುಂದುವರಿಯುವುದು)

## ಎಲ್ಲಿಯವರೆಗೆ ಕಲಿಯುವುದು?


ಪ್ಲೇಟೋ ಒಬ್ಬ ದೊಡ್ಡ ದಾರ್ಶನಿಕ. ಅವನ ಮಿತ್ರನೊಬ್ಬ ತನ್ನ ಸಂಭಾಷಣೆಯ ಮಧ್ಯೆ ಹೀಗೆ ಪ್ರಶ್ನೆ ಮಾಡಿದ: "ಸೋದರ, ನಿನ್ನ ಹತ್ತಿರ ಪ್ರಪಂಚದಾದ್ಯಂತ ದೊಡ್ಡ ದೊಡ್ಡ ವಿದ್ವಾಂಸರು ಜ್ಞಾನವನ್ನು ಗಳಿಸಲು ಬರುತ್ತಾರೆ. ಹೀಗಿದ್ದರೂ ಒಂದು ವಿಷಯ ನನಗೆ ಗೊತ್ತಾಗುತ್ತಿಲ್ಲ. ನೀನು ದೊಡ್ಡ ದಾರ್ಶನಿಕ, ಪಂಡಿತ. ಆದರೂ ಬೇರೆಯವರ ಹತ್ತಿರ ಶಿಕ್ಷಣವನ್ನು ಸ್ವೀಕರಿಸಲು ಯಾವಾಗಲೂ ಕಾತರನಾಗಿರುತ್ತೀಯೆ, ಅದೂ, ತುಂಬ ಉತ್ಸಾಹ ಮತ್ತು ಒಲವಿನಿಂದ. ಇದಕ್ಕೆ ಕಾರಣ ಏನು? ದಯವಿಟ್ಟು ತಿಳಿಸು. ನಿನ್ನ ಶಿಕ್ಷಣ ಎಲ್ಲಿಯವರೆಗೆ ನಡೆಯುತ್ತಿರುತ್ತದೆ?" ಆಗ ತತ್ತ್ವಶಾಸ್ತ್ರಜ್ಞನಾದ ಪ್ಲೇಟೋ ಹೀಗೆ ಉತ್ತರ ನೀಡಿದನು: "ಎಲ್ಲಿಯವರೆಗೆ ಬೇರೆಯವರಲ್ಲಿ ಏನಾದರೂ ಕಲಿಯುವುದಕ್ಕೆ ನನಗೆ ನಾಚಿಕೆ ಅನಿಸುವುದಿಲ್ಲವೋ, ಅಲ್ಲಿಯವರೆಗೆ." *(ಸಂಗ್ರಹ : ಸ್ವಾಮಿ ಶಾಂತಿನಾಥಾನಂದ)*

# ಸ್ವಾಮಿ ಶಿವಾನಂದರು

ಶ್ರೀರಾಮಕೃಷ್ಣ ಶಿಷ್ಯೋದ್ಯಾನ

ಡಾ. ಕೆ. ಅನಂತರಾಮು

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ ತನ್ನ ವಿಭೂತಿಗಳನ್ನು ವಿಸ್ತರಿಸುತ್ತ, "ನಾನು ಮಾಸಗಳಲ್ಲಿ ಮಾರ್ಗಶೀರ್ಷ ಮಾಸವಾಗಿದ್ದೇನೆ" ಎಂದು ಹೇಳಿದ್ದಾನೆ. ೧೬. ೧೧. ೧೮೫೪ರ ಅಂತಹ ಮಾರ್ಗಶೀರ್ಷದ ಒಂದು ಏಕಾದಶಿಯ ಪುಣ್ಯದಿನದಂದು ಸ್ವಾಮಿ ಶಿವಾನಂದರು ಅವತರಿಸಿದರು. ಕೋಲ್ಕೊತಾಗೆ ಹತ್ತಿರದ ಬರಾಸತ್ ಎಂಬುದು ಅವರ ಹುಟ್ಟೂರು. ತಾರಕನಾಥ ಘೋಷಾಲ್ ಎಂಬುದು ಅವರ ಹುಟ್ಟುಹೆಸರು. ರಾಮಕನ್ಯೆ ಘೋಷಾಲ್ ಮತ್ತು ವಾಮಸುಂದರಿ ಅವರ ತಂದೆತಾಯಿಗಳು. ಶಿವಾನಂದರಿಗೆ ಚಂಡಿ ಎಂಬ ಅಕ್ಕನಿದ್ದರೆ, ಕ್ಷೀರದಾ ಮತ್ತು ನೀರದಾ ಎಂಬಿಬ್ಬರು ತಂಗಿಯರಿದ್ದರು.



## ಪರಮಹಂಸರ ಭಕ್ತಿಗೆ ಪಾತ್ರರು

ರಾಮಕನ್ಯೆ ಅತ್ಯಂತ ಉದಾರಚರಿತರಾಗಿ ತಮ್ಮ ಮನೆಯಲ್ಲಿ ಶಾಲೆಗೆ ಹೋಗುವ ಮೂವತ್ತು ಬಡಮಕ್ಕಳನ್ನು ಊಟ ಬಟ್ಟೆ ವಸತಿಗಳನ್ನಿತ್ತು ಕಾಪಾಡಿಕೊಂಡಿದ್ದರು. ತಂತ್ರಶಾಸ್ತ್ರ ಪ್ರವೀಣರಾಗಿದ್ದ ಅವರು ಆದಿಶಕ್ತಿಯ ಆರಾಧಕರಾಗಿದ್ದರು. ಅದಕ್ಕಾಗಿ ಮನೆಯಲ್ಲಿಯೇ ಐದು ತಲೆಬುರುಡೆಗಳನ್ನು ನೆಲಕ್ಕೆ ಮೆಟ್ಟಿಸಿ 'ಪಂಚಮುಂಡಿ' ಎಂದು ಕರೆಯುವ ಪೂಜಾಗೃಹವೊಂದನ್ನು ರಚಿಸಿಕೊಂಡಿದ್ದರು. ಜೀವನೋಪಾಯಕ್ಕೆ ವಕೀಲೀವೃತ್ತಿಯನ್ನು ಅವಲಂಬಿಸಿ ಅದನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು.

ದಕ್ಷಿಣೇಶ್ವರದಲ್ಲಿ ಕಾಳಿಮಂದಿರವನ್ನು ಕಟ್ಟಿಸಿ, ಅದಕ್ಕೆ ಅರ್ಚಕರಾಗಿ ಪರಮಹಂಸರನ್ನು ನೇಮಕಮಾಡಿದ್ದ ಮಹಾಮಹಿಳೆ ರಾಣಿ ರಾಸಮಣಿಗೆ ರಾಮಕನ್ಯೆ ಅವರು ಕಾನೂನು ಸಲಹೆಗಾರರಾಗಿದ್ದರು; ಆಗಾಗ ದಕ್ಷಿಣೇಶ್ವರಕ್ಕೆ ಹೋಗಿ ಬರುತ್ತಿದ್ದರು. ಅದೇ ಕಾರಣವಾಗಿ ಅವರಿಗೆ ಪರಮಹಂಸರು ಪರಿಚಿತರಾಗಿದ್ದರು. ಉಗ್ರಸಾಧನೆಯ ಪರಿಣಾಮದಿಂದಾಗಿ ಒಮ್ಮೆ ಪರಮಹಂಸರಿಗೆ ದೇಹದಲ್ಲಿ ಅಸಹನೀಯವಾದ ಉರಿ ವ್ಯಾಪಿಸಿಕೊಂಡು, ರೋಮಗಳೆಲ್ಲ ಸುಟ್ಟು ಹೋಗಿದ್ದವು. 'ಇದಕ್ಕೇನು ಪರಿಹಾರ?' ಎಂದು ಪರಮಹಂಸರು ಕೇಳಿದಾಗ ರಾಮಕನ್ಯೆ ಅವರು ಜಗನ್ಮಾತೆಯ ಹೆಸರಿನಲ್ಲಿ ರಕ್ಷಾಯಂತ್ರವೊಂದನ್ನು ಸಿದ್ಧಗೊಳಿಸಿ, ಅದನ್ನು ಅವರಿಗೆ ಧಾರಣೆ ಮಾಡಿಸಿದರು. ಆಶ್ಚರ್ಯಕರವೆಂಬಂತೆ ಪರಮಹಂಸರ ಮೈಯುರಿ ತಣ್ಣಗಾಯಿತು. ಅಂದಿನಿಂದ ಅವರು ರಾಮಕನ್ಯೆಯವರನ್ನು ಗುರುವೆಂಬಂತೆ ಪ್ರೀತಿ, ಭಕ್ತಿಗಳಿಂದ ಕಾಣುತ್ತಿದ್ದರು.

## ಬದುಕಿನ ಏಳುಬೀಳುಗಳು

ತಾರಕರು ತಮ್ಮ ಒಂಬತ್ತನೆಯ ವಯಸ್ಸಿಗೇ ತಾಯಿ ವಾಮಸುಂದರಿಯನ್ನು ಕಳೆದುಕೊಂಡರು. ಆಮೇಲೆ ಅಕ್ಕನಾದ ಚಂಡಿಯು ತನ್ನಿಬ್ಬರು ಮಕ್ಕಳನ್ನು ತೊರೆದು ಅಕಾಲಮರಣಕ್ಕೆ ತುತ್ತಾದಳು.ಅದರ ಹಿಂದೆಯೇ ತಂಗಿ ಕ್ಷೀರದಾಳ ಗಂಡ ತೀರಿ ಹೋದನು. ಹೀಗೆ ಒಂದರ ಹಿಂದೊಂದರಂತೆ ಬೀಸಿದ ದುರದೃಷ್ಟದ ಬಿರುಗಾಳಿಯು ತಾರಕರ ಚಿತ್ತದ ಮೇಲೆ ವೈರಾಗ್ಯದ ಬೀಜಗಳನ್ನು ಬಿತ್ತಿ ಅವರು ಅಂತರ್ಮುಖಿ ಆಗುವಂತೆ ಮಾಡಿತು.

ತಾರಕರ ವಿದ್ಯಾಭ್ಯಾಸವೆಲ್ಲವೂ ಅವರ ಹುಟ್ಟೂರಾದ ಬರಾಸತ್‌ನಲ್ಲಿಯೇ ನಡೆಯಿತು. ಮೇಧಾವಿಯಾದ ವಿದ್ಯಾರ್ಥಿಯಾಗಿದ್ದ ಅವರಿಗೆ ಎಳವೆಯಿಂದಲೇ ಪೂಜೆ ಭಜನೆ ಜಪಧ್ಯಾನಗಳು ಪ್ರಿಯವಾಗಿದ್ದು, ಶಾಲೆಯ ವಿದ್ಯೆಯಲ್ಲಿ ಹೇಳಿಕೊಳ್ಳುವಂತಹ ಅಭಿರುಚಿಯೇನೂ ಇರಲಿಲ್ಲ. ಹಾಗೂ ಹೀಗೂ ಅವರು ಹತ್ತನೆಯ ತರಗತಿಗೆ ಬಂದು ಮುಟ್ಟಿದರು. ಇಂದಿಗೆಂತು, ನಾಳಿಗೆಂತು ಎಂದು ಚಿಂತಿಸದೆ ರಾಮಕನ್ಯೆ ತಮ್ಮ ಸಂಪಾದನೆಯನ್ನೆಲ್ಲ ಪರೋಪಕಾರಕ್ಕಾಗಿಯೇ ಖರ್ಚು ಮಾಡಿಬಿಡುತ್ತಿದ್ದರು. ಸ್ವಂತಕ್ಕೇನೂ ಕೂಡಿಡದೆ ಕಾಲಕ್ರಮದಲ್ಲಿ ಆದಾಯವು ಕುಗ್ಗಿ, ಅವರು ಆರ್ಥಿಕಸಂಕಷ್ಟಕ್ಕೆ ಸಿಲುಕಿದರು. ಆಗ ತಾರಕರು ತಮ್ಮ ವಿದ್ಯಾಭ್ಯಾಸವನ್ನು ಅಷ್ಟಕ್ಕೇ ಕೈಬಿಟ್ಟು ತಂದೆಗೆ

ಸಹಾಯವಾಗಲೆಂದು, ರೈಲ್ವೆ ಇಲಾಖೆಯ ಉದ್ಯೋಗಿಯಾಗಿ ಮೋಘಲ್‌ಸರಾಯ್ ಪಟ್ಟಣಕ್ಕೆ ಹೊರಟುಹೋದರು.

ತಾರಕರಿಗೆ ವಿವಾಹವಾಗುವ ಉದ್ದೇಶವೇ ಇರಲಿಲ್ಲ. ಆದರೆ ತಂಗಿ ನೀರದಾಳ ಮದುವೆಯ ಕಾಲ ಬಂದಾಗ ರಾಮಕನ್ಯೆ ವರದಕ್ಷಿಣೆ ಕೊಡುವ ಶಕ್ತಿಯಿಲ್ಲದೆ, ಒಂದೇ ಮನೆಯಿಂದ ಕೊಟ್ಟುತಂದು ಮಾಡುವ ಸಂಬಂಧವೊಂದನ್ನು ಕುದುರಿಸಿಕೊಂಡರು. ತಮಗೆ ಸರ್ವಥಾ ಇಷ್ಟವಿಲ್ಲದಿದ್ದರೂ ಧರ್ಮಸಂಕಟಕ್ಕೆ ಸಿಲುಕಿ ತಾರಕರು ವಿವಾಹಿತರಾಗಬೇಕಾಯಿತು. ನಿತ್ಯಕಾಳಿದೇವಿ ಅವರ ಮಡದಿಯಾದಳು. ಸ್ವಲ್ಪಕಾಲಾನಂತರ ತಾರಕರು ರೈಲ್ವೆ ಉದ್ಯೋಗವನ್ನು ತೊರೆದು ಕೊಲ್ಕೊತಾಗೆ ಬಂದು, ಬೇರೊಂದು ನೌಕರಿಗೆ ಸೇರಿಕೊಂಡರು. ಆ ಕಾಲಾವಧಿಯಲ್ಲಿ ಕೇಶವಚಂದ್ರಸೇನರ ಬ್ರಾಹ್ಮಸಮಾಜದ ಸದಸ್ಯರಾಗಿ ನಿರಾಕಾರೋಪಾಸನೆಯತ್ತ ಒಲಿದರು. ಭಗವಾನ್ ಬುದ್ಧನ ಚರಿತ್ರೆಯನ್ನೋದಿ ಅದರಿಂದ ಬಹಳ ಪ್ರಭಾವಿತರಾದರು. ವಾರಕ್ಕೊಮ್ಮೆ ಬರಾಸತ್‌ಗೆ ಹೋಗಿ ಕುಟುಂಬದ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದರು.

### ಜಗನ್ಮಾತೆಗೆ ಶರಣಾದರು

೧೮೮೦ ರಲ್ಲಿ ತಾರಕರು ಕೋಲ್ಕೊತಾದ ರಾಮಚಂದ್ರ ದತ್ತರ ಮನೆಯಲ್ಲಿ ಪರಮಹಂಸರನ್ನು ಮೊದಲ ಬಾರಿಗೆ ದರ್ಶನ ಮಾಡಿದರು. ಆದರೆ ಅವರೊಡನೆ ಆಗ ಸಂಭಾಷಣೆ ನಡೆಸಲಾಗಲಿಲ್ಲ. ಅದಾಗಿ ಒಂದೇ ತಿಂಗಳಿಗೆ ದಕ್ಷಿಣೇಶ್ವರದಲ್ಲಿ ಆ ಮಹಾಗುರುವನ್ನು ಕಂಡು ಮಾತನಾಡಿ ಮಹದಾನಂದದಲ್ಲಿ ಮುಳುಗಿದರು. ಪರಮಹಂಸರು ಕಾಳಿಕಾಮಾತೆಗೆ ಅಡ್ಡಬೀಳುವಾಗ ತಾರಕರು ನೋಡುತ್ತ ಸುಮ್ಮನೇ ನಿಂತಿದ್ದರು. ಆಗ ಪರಮಹಂಸರು "ಬ್ರಾಹ್ಮಸಮಾಜವು ಏನನ್ನು ಬೋಧಿಸುತ್ತದೆ?" ಎಂದು ಕೇಳಿದರು. ಅದಕ್ಕೆ ತಾರಕರು, "ಪರಮಾತ್ಮನು ನಿರಾಕಾರ, ಅವನು ಎಲ್ಲೆಲ್ಲಿಯೂ ಇದ್ದಾನೆ ಎಂದು ಹೇಳುತ್ತದೆ" ಎಂದು ಉತ್ತರಿಸಿದರು. ಆಗ ಪರಮಹಂಸರು "ಪರಮಾತ್ಮನು ಎಲ್ಲೆಲ್ಲಿಯೂ ಇರುವವನಾದರೆ ಈ ಶಿಲಾಮೂರ್ತಿಯಲ್ಲೇಕೆ ಇರಬಾರದು" ಎಂದು ಮರುಪ್ರಶ್ನೆಯನ್ನೆಸೆದರು. ಆ ನಿಮಿಷದಲ್ಲಿಯೇ ತಾರಕರಿಗೆ, 'ಇವರು ಹೇಳುವುದೂ ಸರಿಯೆ' ಎಂದೆನಿಸಿ, ತಾವೂ ಜಗನ್ಮಾತೆಗೆ ಅಡ್ಡಬಿದ್ದರು. ಗುರುಶಿಷ್ಯರ ಹೃದಯಗಳು ಒಂದುಗೂಡಿದ ಆ ಮುಹೂರ್ತ ಅಪೂರ್ವವಾಗಿತ್ತು.

ಪರಮಹಂಸರು ತಾರಕರ ಪೂರ್ವಾಪರಗಳನ್ನೆಲ್ಲ ಚೆನ್ನಾಗಿ ವಿಚಾರಿಸಿಕೊಂಡರು. ರಾಮಕನ್ಯೆ ಅವರ ಮಗನೆಂದು ತಿಳಿದಾಗ, "ಓ ಸಂತೋಷ, ನಾನು ಅವರನ್ನು ಚೆನ್ನಾಗಿಬಲ್ಲೆ" ಎಂದು ಉಲ್ಲಾಸಭರಿತರಾದರು. ಸಮಾಧಿಸ್ಥಿತಿಯನ್ನು ಪಡೆಯಬೇಕೆಂದು ಹಂಬಲಿಸುತ್ತಿದ್ದ ತಾರಕರ ಮನದಾಳವನ್ನರಿತು ಒಂದು ದಿನ ಅವರ ನಾಲಗೆಯನ್ನು ಹೊರಕ್ಕೆಳೆದುಕೊಂಡು, ತಮ್ಮ ಬೆರಳಿನಿಂದ ದಿವ್ಯಮಂತ್ರಾಕ್ಷರಗಳನ್ನು ಬರೆದರು. ಒಡನೆಯೇ ತಾರಕರು ಆಳವಾದ ಧ್ಯಾನದಲ್ಲಿ ಮುಳುಗಿ ಜಗತ್ತನ್ನೇ ಮರೆತರು. ಮತ್ತೆ ಎಚ್ಚರಕ್ಕೆ ಬಂದಾಗ ಅವರ ಹೃದಯಗ್ರಂಥಿಗಳೆಲ್ಲ ಕಡಿದುಹೋಗಿದ್ದುವು; ಅವರ ಸಂಶಯಗಳೆಲ್ಲ ಅಳಿದುಹೋಗಿದ್ದುವು.

### ಮಹಾಪುರುಷ್ ಮಹಾರಾಜ್

ಮದುವೆಯಾದರೂ ತಾರಕರು ಬ್ರಹ್ಮಚರ್ಯವನ್ನೇ ಪಾಲಿಸುತ್ತ ಮಡದಿಯ ಸಂಪರ್ಕದಿಂದ ಬೇರೆಯಾಗಿರುತ್ತಿದ್ದರು. ಧ್ಯಾನಮಗ್ನರಾಗಿ ಕುಳಿತು ರಾತ್ರಿಗಳನ್ನು ಕಳೆದು ಬಿಡುತ್ತಿದ್ದರು. ಪತಿಯ ಈ 'ವಿಚಿತ್ರವರ್ತನೆ'ಯಿಂದ ನಿತ್ಯಕಾಳಿಗೆ ದುಃಖವು ಉಮ್ಮಳಿಸಿ ಬರುತ್ತಿತ್ತು. ಅವಳು ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಅದನ್ನು ನೋಡುತ್ತಿದ್ದ ತಾರಕರೂ "ಅಯ್ಯೋ, ನನ್ನ ದೆಸೆಯಿಂದ ಸುಕೋಮಲ ಕುಸುಮವೊಂದು ಬಾಡಿಹೋಗುವಂತಾಯಿತಲ್ಲ" ಎಂದು ಗಾಸಿಗೊಳ್ಳುತ್ತಿದ್ದರು. ಈ ಸಂಕಟವನ್ನು ಪರಮಹಂಸರ ಮುಂದೆ ಹೇಳಿಕೊಂಡಾಗ ಅವರು ವಿಶಿಷ್ಟವಾದ ವ್ರತವೊಂದನ್ನು ಬೋಧಿಸಿದರು. ಅದನ್ನು ನೆರವೇರಿಸಿದುದರ ಫಲವಾಗಿ ನಿತ್ಯಕಾಳಿಯ ಮನಸ್ಸು ಶಾಂತವಾಯಿತು. ಈ ವಿಚಾರವು ಮುಂದೆ ವಿವೇಕಾನಂದರಿಗೆ ತಿಳಿದಾಗ ಅವರು ಅಚ್ಚರಿಪಟ್ಟು "ನೀನು ಮಹಾಪುರುಷ" ಎಂದು ಹೊಗಳಿದರು. ಆ ಹೊಗಳಿಕೆಯ ನಾಮವೇ ಶಿವಾನಂದರಿಗೆ 'ಮಹಾಪುರುಷ್ ಮಹಾರಾಜ್' ಎಂಬ ಅಡ್ಡಹೆಸರಾಗಿ ಅಲಂಕಾರಗೊಂಡಿತು.

ನಿತ್ಯಕಾಳಿಯು ಮದುವೆಯಾದ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬದುಕಲಿಲ್ಲ. ಒಮ್ಮೆ ಇದ್ದಕ್ಕಿದ್ದಂತೆ ಅನಾರೋಗ್ಯಕ್ಕೆ ಗುರಿಯಾಗಿ ಹಾಸುಗೆಹಿಡಿದು ಮಲಗಿಬಿಟ್ಟಳು. "ಅದೇನು ಸಾಧನೆಯೋ ಅವರು ಮಾಡಿಕೊಳ್ಳಲಿ, ಕೃತಕೃತ್ಯರಾಗಲಿ, ನನ್ನಿಂದ ಆಗಬೇಕಾದ್ದೇನಿದೆ" ಎಂಬ ಭಾವನೆಯಲ್ಲಿ ಅವಳು ಮೇಲೇಳದೆ ಕಣ್ಣುಮುಚ್ಚಿಯೇಬಿಟ್ಟಳು. ಮನುಷ್ಯದೇಹವನ್ನು ಹೊತ್ತು ಬಂದ ಮೇಲೆ ದುಃಖದುಮ್ಮಾನಗಳು ತಟ್ಟದೆ ಇರುತ್ತವೆಯೆ? ಎಳೆಯ ಜೀವವೊಂದು ಅಕಸ್ಮಾತ್ ನಂದಿಹೋದುದು ತಾರಕರನ್ನು ಸಂತಾಪಕ್ಕೆ ತಳ್ಳಿತು. ಪತಿಯ ಸ್ಥಾನದಲ್ಲಿ ನಿಂತು ಉತ್ತರಕ್ರಿಯಾದಿಗಳನ್ನೆಲ್ಲ ನಿರ್ಮಮಭಾವದಿಂದ ನೆರವೇರಿಸಿದರು. ವೈರಾಗ್ಯದ ಭಾವ ಮತ್ತಷ್ಟು ಉದ್ದೀಪನಗೊಂಡು ತಾರಕರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯಿತ್ತು ಸಂಪೂರ್ಣವಾಗಿ ಸದ್ಗುರುವಿಗೇ ಸಮರ್ಪಿಸಿಕೊಂಡುಬಿಟ್ಟರು.

### ತಂದೆಯ ಆಶೀರ್ವಾದ

ನಿತ್ಯಕಾಳಿಯು ಸ್ವರ್ಗಸ್ಥಳಾದ ವರ್ಷವೇ ತಾರಕರು ತಮ್ಮ ತಂದೆಯವರನ್ನು ಕುರಿತು, "ಅಪ್ಪಾ, ನಾನು ಸಂನ್ಯಾಸಿ

ಯಾಗುತ್ತೇನೆ. ನೀವು ಅನುಮತಿ ಕೊಡಬೇಕು" ಎಂದು ಕೇಳಿಕೊಂಡರು. ಆ ಮಾತನ್ನು ಕೇಳುತ್ತಿದ್ದಂತೆಯೇ ರಾಮಕನ್ಯೆ ಅವರ ನೇತ್ರಗಳಿಂದ ಅಶ್ರುಧಾರೆ ಬಳಬಳನೆ ಹರಿಯತೊಡಗಿತು. ಒಂದುಕಡೆ ಅಗಲಿಕೆಯ ನೋವು, ಇನ್ನೊಂದು ಕಡೆ ಮಗನು ದಿವ್ಯಜೀವನಕ್ಕೆ ಸಮರ್ಪಿತ ನಾಗುತ್ತಿದ್ದಾನೆಂಬ ನಲಿವು – ಇಂತಹ ಮಿಶ್ರಭಾವದಲ್ಲಿ ಅವರು ಮುಳುಗಿದರು. ಮೊದಲು ಮನೆದೇವರಿಗೆ ನಮಸ್ಕಾರಮಾಡಿಸಿದರು. ಆ ಮೇಲೆ ಶಿರದಮೇಲೆ ಕರ ವನ್ನಿಟ್ಟು, "ಮಗನೇ, ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿ ಸಾಗಬೇಕೆಂಬ ಆಕಾಂಕ್ಷೆ ನನಗೂ ಇತ್ತು, ಆದರೆ ಅದು ನನಗೆ ದಕ್ಕಲಿಲ್ಲ. ಆದರೆ ಅದನ್ನು ನೀನು ಸಾಧಿಸುವಂತಾಗಲಿ; ನಿನ್ನ ಬದುಕು ಉಜ್ವಲವಾಗಲಿ" ಎಂದು ಹೃದಯತುಂಬಿ ಆಶೀರ್ವದಿಸಿದರು.

ಪರಮಹಂಸರು ಗಂಟಲಿನ ವ್ಯಾಧಿಗೆ ತುತ್ತಾದ ಬಳಿಕ ಅವರು ಕಾಶೀಪುರ ತೋಟದಮನೆಯನ್ನು ಸೇರಿದರು. ಅಲ್ಲಿ ಅವರ ಆರೈಕೆಗೆ ಹಲವು ಶಿಷ್ಯರು ನಿಂತರು. ತಾರಕರೂ ಆಗ ಅಲ್ಲಿದ್ದರು. ಆದರೆ ಪರಮಹಂಸರು ರಾಮಕನ್ಯೆ ಅವರನ್ನು ಗುರುಭಾವದಿಂದ ನೋಡುತ್ತಿದ್ದರಿಂದ ತಾರಕ ರಿಂದ ಯಾವುದೇ ಸೇವೆಯನ್ನು ಹೇಳಿಮಾಡಿಸಿಕೊಳ್ಳು ತ್ತಿರಲಿಲ್ಲ. ಆ ಕಾಲಾವಧಿಯಲ್ಲಿಯೇ ತಾರಕರಿಗೆ ಸದ್ಗುರುವಿನ ಅಮೃತಹಸ್ತದಿಂದ ಕಾಷಾಯವಸ್ತ್ರ ದಕ್ಕಿತು. ಪರಮಹಂಸರು ಕಣ್ಮರೆಯಾದ ಮೇಲೆ ವಿವೇಕಾನಂದರ ಮುಂದಾಳುತನದಲ್ಲಿ ಶಾಸ್ತ್ರೀಯ ವಿಧಿವಿಧಾನಗಳಿಂದ ಸಂನ್ಯಾಸಾಶ್ರಮವನ್ನು ಪ್ರವೇಶಿಸಿದರು. ವಾಮಸುಂದರಿಯು ತಾರಕೇಶ್ವರನೆಂಬ ಹೆಸರಿನ ಶಿವನನ್ನು ಆರಾಧಿಸಿ ತಾರಕನಾಥರನ್ನು ಪಡೆ ದಿದ್ದಳು. ಹೀಗೆ ಶಿವಾಂಶಸಂಜನಿತರಾದ ಅವರಿಗೆ ವಿವೇಕಾ ನಂದರು 'ಶಿವಾನಂದ' ಎಂಬ ಅನ್ವರ್ಥ ಆಶ್ರಮನಾಮ ವನ್ನಿತ್ತು ಹರ್ಷಪಟ್ಟರು.

### ಕ್ಷೇತ್ರದರ್ಶನ

ಶಿವಾನಂದರು ಆತ್ಮೋನ್ನತಿಗಾಗಿ ಹತ್ತಾರು ವರ್ಷಗಳ ಕಾಲ ಭರತಖಂಡದ ಸುಪ್ರಸಿದ್ಧ ತೀರ್ಥಕ್ಷೇತ್ರಗಳನ್ನು ಭಕ್ತಿ ಪರವಶತೆಯಿಂದ ಸುತ್ತಿದರು. ಬುದ್ಧದೇವನ ಜ್ಞಾನೋದಯ ತಾಣವಾದ ಬುದ್ಧಗಯಾಕ್ಕೆ ಹೋಗಿದ್ದಾಗ ಅವರೊಡನೆ ವಿವೇಕಾನಂದರೂ ಇದ್ದರು. ಒಂದು ರಾತ್ರಿ ಅಲ್ಲಿ ಶಿವಾ ನಂದರೂ ಧ್ಯಾನಸ್ಥರಾಗಿ ಕುಳಿತಿದ್ದಾಗ ಬುದ್ಧದೇವರ ತೇಜೋಮಯ ಕಾಯವು ಅವರ ದೇಹದೊಳಕ್ಕೆ ಪ್ರವೇಶ ಮಾಡಿದುದನ್ನು ವಿವೇಕಾನಂದರು ಕಂಡು ರೋಮಾಂಚಿತ ರಾದರು. ಆಮೇಲೆ ಆನಂದಾಶ್ರುಗಳನ್ನು ಸುರಿಸುತ್ತ ಶಿವಾ ನಂದರನ್ನು ತಬ್ಬಿಕೊಂಡರು. ಕ್ಷೇತ್ರದರ್ಶನ ಕಾಲದಲ್ಲಿ ಕರ್ನಾಟಕವೂ ಶಿವಾನಂದರ ಪಾದಸ್ಪರ್ಶದಿಂದ ಪವಿತ್ರ ವಾಯಿತು. ಬೆಂಗಳೂರು, ಮೈಸೂರು, ರಾಮಾನುಜರಿಂದ ಪ್ರಸಿದ್ಧವಾದ ಮೇಲುಕೋಟೆ ಅವರಿಗೆ ಅತ್ಯಂತ ಪ್ರಿಯ ವೆನಿಸಿದುವು. ಮೈಸೂರಿನ ಚಾಮುಂಡೇಶ್ವರಿಯನ್ನು ಬೆಟ್ಟವೇರಿ ದರ್ಶನಮಾಡಿ ಅಲ್ಲಿ 'ದುರ್ಗಾಸಪ್ತಶತಿ'ಯ ಪಾರಾಯಣ ಮಾಡಿದರು. "ಆಹಾ, ತಾಯೆ, ನೀನಿಲ್ಲಿ ಎಷ್ಟು ಜೀವಂತಿಕೆಯಿಂದ ನಳನಳಿಸುತ್ತಿದ್ದೀಯೆ" ಎಂದು ಸಂಭ್ರಮಿಸಿದರು.

ರಾಮಕೃಷ್ಣಮಠ ಮತ್ತು ಮಿಷನ್ನಿನ ಕಾರ್ಯ ಚಟುವಟಿಕೆ ಗಳನ್ನು ವಿಸ್ತರಿಸುವ ದಿಕ್ಕಿನಲ್ಲಿ ಶಿವಾನಂದರ ಕೊಡುಗೆ ಅಪೂರ್ವವೆಂದು ಹೇಳಬೇಕು. ೧೯೧೦ರಲ್ಲಿ ಅವರು ಮಠ ಮತ್ತು ಮಿಷನ್ನುಗಳ ಉಪಾಧ್ಯಕ್ಷಸ್ಥಾನವನ್ನು, ಅಲ್ಲಿಂದ ಮುಂದೆ ೧೯೨೨ರಲ್ಲಿ ಅಧ್ಯಕ್ಷಸ್ಥಾನವನ್ನೂ ಅಲಂಕರಿಸಿ ಕಾರ್ಯತತ್ಪರರಾದರು. ಅಲ್ಮೋರಾ, ನಾಗಪುರ, ಮುಂಬಯಿ, ದೇವಘರ್, ಊಟಿ ಮುಂತಾದೆಡೆಗಳಲ್ಲಿ ಅವರು ಹೊಸದಾಗಿ ಆಶ್ರಮಶಾಖೆಗಳನ್ನು ಉದ್ಘಾಟಿಸಿ ದರು.

### ವರ್ಣಮಯ ವ್ಯಕ್ತಿತ್ವ

**ನಯವಿನಯ ಸಂಪನ್ನ:** ಆಡಳಿತಾತ್ಮಕವಾಗಿ ಅತ್ಯುನ್ನತ ಪದವಿಗೇರಿದರೂ ಶಿವಾನಂದರು ತಮ್ಮ ಸರಳತೆ ಮತ್ತು ವಿನಯಸಂಪನ್ನತೆಗಳನ್ನು ಬಿಟ್ಟುಕೊಡಲಿಲ್ಲ. "ನಾನೇನು ಪದವೀಧರನಲ್ಲ, ಮೇಧಾವಿಯಲ್ಲ, ವಾಗ್ಮಿಯಲ್ಲ, ಹೋಗಲಿ ಚಲುವರಾಯನೇ ಎಂದರೆ ಅದೂ ಅಲ್ಲ, ಕುರೂಪಿ. ತನ್ನ ಕಾರ್ಯಸಾಧನೆಗಾಗಿ ಸದ್ಗುರುವೇ ನನ್ನನ್ನು ತನ್ನ ಕೈಗೊಂಬೆ ಯನ್ನಾಗಿ ಮಾಡಿಕೊಂಡಿದ್ದಾನೆ" ಎಂದು ಅವರು ಹೇಳುತ್ತಿದ್ದರು.

**ಗುರುಭಕ್ತ:** ಶಿವಾನಂದರು ಒಂದು ನಾಯಿಯನ್ನು ಸಾಕಿ ದ್ದರು. ಅದನ್ನು ಪ್ರೀತಿಯಿಂದ 'ಕೇಲೋ' ಎಂದು ಕೂಗಿ ಕರೆಯುತ್ತಿದ್ದರು. "ಕೇಲೋ ನನ್ನ ಸಾಕುನಾಯಿ, ನಾನಾ ದರೋ ಶ್ರೀರಾಮಕೃಷ್ಣರ ಸಾಕುನಾಯಿ" ಎಂದು ಹೇಳಿ ಕೊಳ್ಳುತ್ತಿದ್ದರು.

**ಭಕ್ತಜನಪ್ರೇಮಿ:** ಶಿವಾನಂದರು ತಮ್ಮ ಬಳಿಗೆ ಬರುತ್ತಿದ್ದ ಭಕ್ತರ ಕಷ್ಟಸುಖಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡು ಪರಿಹಾರ ಸೂಚಿಸುತ್ತಿದ್ದರು. ಜಪತಪಧ್ಯಾನಗಳನ್ನು ಶಕ್ತಿ ಮೀರಿ ಮಾಡುತ್ತಿದ್ದುದರಿಂದ, "ಇಷ್ಟೊಂದು ಮಾಡಬೇಕೆ ನೀವು" ಎಂದು ಕೆಲವರು ಪ್ರಶ್ನಿಸುತ್ತಿದ್ದರು. "ನನ್ನಿಂದ ದೀಕ್ಷೆ ಪಡೆದವರು ಎಲ್ಲೆಲ್ಲೋ ಚೆದುರಿಹೋಗಿದ್ದಾರೆ, ಕೆಲವರು ಜಪಮಾಡುತ್ತಿದ್ದಾರೆ; ಕೆಲವರು ಮಾಡದೆಯೂ ಇರಬಹುದು. ಅಂತಹವರ ಮಾರ್ಗ ಪರಿಶುದ್ಧವಾಗಬೇಕು, ಅವರಿಗೂ ಜಪಮಾಡುವ ಪ್ರೇರಣೆಯುಂಟಾಗಬೇಕು. ಅವರ ಪರವಾಗಿ